**ಸಿವಿಲ್ ಜಡ್ಜ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಜೇವರ್ಗಿ**

| ಕ್ರಿಮಿನಲ್ ಪ್ರಕರಣ ಸಂಖ್ಯೆ | 523/2016 |
|---|---|

ದಿನಾಂಕ 01-03-2021 ರಂದು ಸಾಕ್ಷಿಗೆ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಚಾಸಾಃ 1 ಪ್ರಾಸಾಃ 1

| | |
|---|---|
| ಹೆಸರು | ಪಾರ್ವತಿ |
| ಗಂಡನ ಹೆಸರು | ಬಸವಂತಪ್ಪ ಅಂಕಲಗಿ |
| ವಯಸ್ಸು | 38 ವರ್ಷ |
| ಉದ್ಯೋಗ | ಮನೆಕೆಲಸ |
| ವಾಸಸ್ಥಳ | ಕಾಚಾಪೂರ, ತಾಃ ಜೇವರ್ಗಿ. |

**ಮುಖ್ಯ ವಿಚಾರಣೆಃ ಸ ಸ ಅ ರವರಿಂದಃ**

ಚಾಸಾ-2 ನನ್ನ ಅಕ್ಕ. ಮೃತ ದೊಡ್ಡಮ್ಮ ನನ್ನ ಮಗಳು. ಮೃತ ತಾಯಮ್ಮ ನನ್ನ ಅಕ್ಕ. ಈಗ 5 ವರ್ಷಗಳ ಹಿಂದೆ ನಾನು, ನನ್ನ ಅಕ್ಕ ಮತ್ತು ನನ್ನ ಮಗಳು ರವರು ಹಂಗರಗಿ ಗ್ರಾಮಕ್ಕೆ ಕ್ರಾರ್ಯಕ್ರಮಕ್ಕೆ ಟಂಟಂ ವಾಹನದಲ್ಲಿ ಹೋಗುತ್ತಿದ್ದೇವು. ಸದರಿ ಟಂಟಂ ವಾಹನವನ್ನು ನ್ಯಾಯಾಲಯದ ಮುಂದಿರುವ ಆರೋಪಿಯಾದ ಮಲ್ಕಪ್ಪರವರು ಚಲಾಯಿಸುತ್ತಿದ್ದರು. ಕಾರ್ಯಕ್ರಮ ಮುಗಿಸಿಕೊಂಡು ರಾತ್ರಿ 8-30 ಕ್ಕೆ ನಮ್ಮ ಊರಿಗೆ ವಾಪಸ್ಸು ಬರುತ್ತಿದ್ದಾಗ ಸೈದಾಪೂರ ಕ್ರಾಸ ಹತ್ತಿರ ಯಡ್ರಾಮಿ ಕಡೆಯಿಂದ ನಮ್ಮ ಎದುರಿನಲ್ಲಿ ಟ್ರಾಕ್ಟರ ಜೋರಾಗಿ ಬಂದು ನಮ್ಮ ಟಂಟಂ ವಾಹನಕ್ಕೆ ಡಿಕ್ಕಿಪಡಿಸಿತು. ಆದ್ದರಿಂದ ತಾಯಮ್ಮ ಮತ್ತು ದೊಡ್ಡಮ್ಮನವರಿಗೆ ಗಾಯಗಳಾದವು. ದೊಡ್ಡಮ್ಮನವರಿಗೆ ತಲೆಗೆ ಮತ್ತು ಕಾಲುಗಳಿಗೆ ಗಾಯಗಳಾಗಿ ಸ್ಥಳದಲ್ಲೆ ಮೃತಪಟ್ಟರು. ಟ್ರಾಕ್ಟರ ಚಾಲಕ ಹಾಗೂ ಟಂಟಂ ಚಾಲಕ ಸ್ಥಳದಿಂದ ಓಡಿ ಹೋದರು. ನಂತರ ತಾಯಮ್ಮ ರವರು ಗುಲಬರ್ಗಾ ಆಸ್ಪತ್ರೆಯಲ್ಲಿ ಸೇರಿಸಿದ್ದು ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ. ಸದರಿ ಅಪಘಾತವು ಎರಡು ವಾಹನಗಳ ಚಾಲಕರ ತಪ್ಪಿನಿಂದ ಆಗಿರುತ್ತದೆ. ಎರಡು ವಾಹನಗಳು ತುಂಬಾ ವೇಗವಾಗಿ ಚಲಿಸಲ್ಪಡುತ್ತಿದ್ದವು. ಅದೇ ದಿನ ಪೊಲೀಸ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ.

(ಮೂಲ ದೂರು,ಪ್ರಥಮ ವರ್ತಮಾನ ವರದಿ ಹಾಗೂ ಉಳಿದ ದಾಖಲೆಗಳ ದೃಢೀಕೃತ ಪ್ರತಿಗಳನ್ನು ತನಿಖಾಧಿಕಾರಿಯು ಅಂತಿಮ ವರದಿಯೊಂದಿಗೆ ಸಲ್ಲಿಸಿದ್ದು ಆ ಬಗ್ಗೆ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರ ವಾದಕ್ಕಾಗಿ ಹಾಗೂ ಮುಂದುವರೆದ ಮುಖ್ಯವಿಚಾರಣೆಗಾಗಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಸಾಕ್ಷಿದಾರರು ಹೇಳಿದಂತೆ ನನ್ನ ಉಕ್ತ ಲೇಖನಕ್ಕೆ ಕಂಪ್ಯೂಟರ್ ನಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ. ಸರಿ ಇರುತ್ತದೆ**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ